**ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಪಿ 15 ಮತ್ತು 16 ಯಾವ ಮನೆಯ ವಿದ್ಯುತ್ ಬಿಲ್ ಗಳಾಗಿರುತ್ತವೆ ಎಂದು ದಾಖಲೆಗಳನ್ನು ಕೊಟ್ಟಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಕೊಡದೇ ಇದ್ದರು ಸಹ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 2 ರಂತೆ ನೀಡಿರುವ ಹಿಂಬರಹದಲ್ಲಿ ನನ್ನ ಅರ್ಜಿಯನ್ನು ವಿಲೇಯಲ್ಲಿಡಲಾಗಿದೇ ಎಂದು ನಿಡೀರುತ್ತಾರೆ ಎಂದರೆ ಸಾಕ್ಷಿಯು ನಾನು ಎಲ್ಲಾ ಅರ್ಜಿಗಳನ್ನು ಸಲ್ಲಿಸಿರುತ್ತೇನೆ, ಆದೇಶವಾಗುತ್ತದೆ ಎಂದು ಕಾಯುತ್ತೇನೆ. ನನ್ನ ವಾದಪತ್ರದಲ್ಲಿ ಪ್ರತಿವಾದಿಯರು 2020 ರಲ್ಲಿ ನನ್ನ ಸ್ವತ್ತಿಗೆ ತೊಂದರೆ ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತೇನೆ. ನಿಖರವಾದ ದಿನಾಂಕ ಗೊತ್ತಿಲ್ಲ. ಪ್ರತಿವಾದಿಯರು ಮೊದಲನೇಯ ಬಾರಿ ತೊಂದರೆ ಕೊಟ್ಟಾಗ ಈ ದಾವೆಯನ್ನು ಹೂಡಿರುತ್ತೇನೆ. ದಾವೆಯನ್ನುಹೂಡುವ ಮೊದಲು ಠಾಣೆಗೆ ಹೋಗಿರುತ್ತೇನೆ. ಅಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಇತ್ಯರ್ಥ ಮಾಡಿಕೊಳ್ಳಿ ಎಂದು ತಿಳಿಸಿದ ಮೇರಗೆ ದಾವೆಯನ್ನು ಹೂಡಿರುತ್ತೇನೆ.

2. ನಾನು ಅಕ್ರಮ, ಸಕ್ರಮದ ಅಡಿಯಲ್ಲಿ ಆರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ, ನನ್ನ ಜೊತೆ ಬೇರೆ ಯಾರು ಸಲ್ಲಿಸಿರುತ್ತಾರೆಂದು ಗೊತ್ತಿಲ್ಲ. ನನ್ನ ಜೊತೆ ಬೇರೆಯವರಾದ ಶೋಭಾ, ಕಾಂತಮ್ಮ, ಗಂಗಾದರಪ್ಪ, ಗಂಗಾದೇವಿ, ಸಿದ್ದಗಂಗಮ್ಮ, ಆಶಾ, ಮೈಲಾರಪ್ಪ ಮತ್ತು ವೆಂಕಟಮ್ಮ ಅರ್ಜಿಯನು ಸಲ್ಲಿಸಿರುತ್ತಾರೆ ಎಂದರೆ ಸಲ್ಲಿಸಿರಬಹುದು. ಅವರ ಅರ್ಜಿಯನ್ನು ಪುರಸ್ಕರಿಸಿ ತಹಶೀಲ್ದಾರ್ ರವರು ಅವರಿಗೆ ಹಕ್ಕುಪತ್ರವನ್ನು ನೀಡಿರುತ್ತಾರೆ ಎಂದರೆ ನೀಡಿರಬಹುದು ಗೊತ್ತಿಲ್ಲ.

3. ದಾವಾ ಸ್ವತ್ತು ಮಾಲತಃ ಸರ್ಕಾರಿ ಜಾಗವಾಗಿದ್ದು, ಅದು ಹನುಮಂತಪ್ಪ ಎಂಬುವರಿಗೆ ಮಂಜೂರಾತಿ ಆಗಿರುತ್ತದೆ ಹಾಗೂ ಅವರ ಮರಣದ ನಂತರ 1 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಆ ರೀತಿ ಮಂಜೂರಾತಿ ಯಾಗಿರುವುದಿಲ್ಲ. ಅದೇ ರಿತೀ ದಿನಾಂಕ 19.08.2020 ರಂದು ಮೇಲಿನಜೂಗಾನಹಳ್ಳಿಯ ಗ್ರಾಮ ಪಂಚಾಯತಿ ಯವರು 1 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಈ ಖಾತಾವನ್ನು ಸಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಅವರೇ ಸ್ವಾಧೀನದಲ್ಲಿದ್ದು, ನಾನು ಅವರ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿ ಅವರ ಸ್ವತ್ತಿನ ಕಂದಾಯವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ದಾವೆಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಬೇರೆಯವರ ಸಹಾಯ ಪಡೆದು ಈ ದಾವೆಗೆ ದಾಖಲೆಗಳನ್ನು ಪಡೆದಿರುತ್ತೇನೆ. ಬೇರೆ ವ್ಯಕ್ತಿ ಹೇಳಿದ ಮಾತಿನಂತೆ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಠಾಣೆಯಲ್ಲಿ ವ್ಯಾಜ್ಯ ಇತ್ಯರ್ಥವಾಗದೇ ಇದ್ದಕ್ಕೆ ಠಾಣೆಯ ಸೂಚನೆಯಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಎ.ವಿ.ನಾರಾಯಣರಾವ್ ರವರನ್ನು ನನ್ನ ಪರವಾಗಿ ಸಾಕ್ಷಿ ಮಾಡಿಸುತ್ತೇನೆ. ದಿನಾಂಕ 28.04.2021 ರಲ್ಲಿ ಎ.ವಿ.ನಾರಾಯಣರಾವ್ ಸರ್ವೆ ನಂಬರ್ 62 ರಲ್ಲಿ 1970-2020 ರ ವರೆಗೆ ಎಷ್ಟು ಜನರಿಗೆ ಹಕ್ಕುಪತ್ರಗಳನ್ನು

ನೀಡಿರುತ್ತಾರೆ ಎಂದರೆ ದಾಖಲೆಗಳನ್ನು ನೀಡಿ ಎಂದು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಆರ್ಜಿಯನ್ನು ವಿಲೇ ಯಲ್ಲಿಡಲಾಗಿದೆ ಎಂದು ಸೂಚಿಸಿದರೆ ಅವರು ಸಲ್ಲಿಸಿದ ಅರ್ಜಿಗೆ ಏನು ಉತ್ತರ ಬಂದಿರುತ್ತದೆಂದು ಗೊತ್ತಿಲ್ಲ.

5. ದಾವೆ ಹೂಡಿದ ಮೇಲೆ ಸರ್ವೆ ನಂಬರ್ 62 ರಲ್ಲಿ ತಹಶೀಲ್ದಾರ್ ರವರು ಎಷ್ಟು ಜನರಿಗೆ ಹಕ್ಕುಪತ್ರಗಳನ್ನು ನೀಡಿರುತ್ತಾರೆಂದು ಗೊತ್ತಿಲ್ಲ. ಸರ್ವೆ ನಂಬರ್ 62 ರಲ್ಲಿ 1 ನೇ ಪ್ರತಿವಾದಿಯ ತಾಯಿ ಸ್ವಾ ಧೀನದಲ್ಲಿದ್ದು ಅವರು ಮನೆಯನ್ನು ಸಹ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಅದೇ ಊರಿನವನಾಗಿದ್ದು ಸದರಿ ವಿಷಯ ನನಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**